**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.118/2019**

ಪ್ರಾ.ಸಾ. 10

ಚಾ.ಸಾ. 5

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 11.11.2025**

| | |
|---|---|
| ಸಾಕ್ಷಿದಾರರ ಹೆಸರು | ಶಿವರಾಜು |
| ತಂದೆಯ ಹೆಸರು | ದೇವರಾಜು |
| ವಯಸ್ಸು | 33 ವರ್ಷ |
| ಉದ್ಯೋಗ | ಡ್ರೈವರ್ ಕೆಲಸ |
| ವಾಸ | ತೊಪ್ಪನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.4, ಚಾಸಾ.10, 12 ನನ್ನ ಸಹೋದರರು.ಚಾಸಾ.1 ರಿಂದ ಚಾಸಾ.3, ಚಾಸಾ.6 ರಿಂದ ಚಾಸಾ.11, ಚಾಸಾ.13 ರಿಂದ ಚಾಸಾ.18 ನನಗೆ ಗೊತ್ತು, ಅವರೆಲ್ಲಾ ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಹಾಜರು ಇರುವ 1 ರಿಂದ 3, 5, 7 ರಿಂದ 14 ನೇ ಆರೋಪಿಗಳು ನನಗೆ ಗೊತ್ತು. ನಾನು ಬೆಂಗಳೂರಿನಲ್ಲಿ ವಾಸವಿದ್ದು, ಚಾಲಕ ವೃತ್ತಿಯಲ್ಲಿದ್ದೇನೆ. ಅದಕ್ಕಿಂತ ಹಿಂದೆ ನಾನು ಎಳನೀರು ವ್ಯಾಪಾರ ಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ತೋಪ್ಪನಹಳ್ಳಿಯಲ್ಲಿ ವಾಸ ಇದ್ದೆ.

2. ದಿನಾಂಕ 25.12.2016 ರಂದು ನಾನು ನಿಡಘಟ್ಟದ ಬಳಿಗೆ ಎಳನೀರು ಕುಯ್ಯಲು ಹೋಗಿದ್ದೆ. ಸಮಯ ಸುಮಾರು ಬೆಳಗ್ಗೆ 7.00 ಗಂಟೆಗೆ ರಾಮಣ್ಣನವರ ಮಗ ಮುತ್ತ ನನಗೆ ಫೋನು ಮಾಡಿ ನನ್ನ ದೊಡ್ಡಪ್ಪನ ಮಗ ಅಣ್ಣ ಪ್ರಸನ್ನನಿಗೆ ಕುಂಟರಾಜು ಮತ್ತು ಅವನ

ಮನೆಯವರು ಕಲ್ಲಿನಿಂದ ಹೊಡೆದು ಗಾಯ ಮಾಡಿದ್ದಾರೆಂದು ಹೇಳಿದ. ಅವನಿಗೆ ರಕ್ತ ಬರುತ್ತಿದ್ದು, ಮದ್ದೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಹೇಳಿದ. ಆಗ ನಾನು ನಿಡಘಟ್ಟದಿಂದ ಮದ್ದೂರು ಆಸ್ಪತ್ರೆಗೆ ಹೋದೆ. ನನ್ನ ಅಣ್ಣನನ್ನು ಆಸ್ಪತ್ರೆಯಲ್ಲಿ ನೋಡಿದಾಗ ಅವನ ಹಣೆಗೆ ಗಾಯ ಆಗಿತ್ತು, ಹೊಲಿಗೆ ಹಾಕಿದ್ದರು. ಆಗ ಆಸ್ಪತ್ರೆಯಲ್ಲಿ ಸ್ವಾಮಿ, ಯೋಗರಾಜು, ಹೇಮಂತ್, ಶಿವರಾಮು ಮತ್ತು ಹಲವರು ಇದ್ದರು. ಅಲ್ಲಿನ ವೈದ್ಯರು ತಲೆ ಸ್ಕ್ಯಾನ್ ಮಾಡಬೇಕು ಮಂಡ್ಯಕ್ಕೆ ಕರೆದುಕೊಂಡು ಹೋಗಿ ಎಂದು ಹೇಳಿದರು. ವೈದ್ಯರ ಸಲಹೆ ಮೇರೆಗೆ ಪ್ರಸನ್ನನ್ನು ಪುಟ್ಟಸ್ವಾಮಿ ಮತ್ತು ಮುತ್ತ ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ಬಳಿಕ ನಾನು, ಸ್ವಾಮಿ, ಯೋಗರಾಜು, ಹೇಮಂತ್ ಬೆಳಗ್ಗೆ 11.00 ಗಂಟೆಗೆ ನಮ್ಮ ಊರಿನ ನಮ್ಮ ದೊಡ್ಡಪ್ಪ ಶಿವಣ್ಣನವರ ಮನೆಗೆ ಹೋದೆವು. ಮದ್ಯಾಹ್ನ ಸುಮಾರು 1.00 ಗಂಟೆಗೆ ಪ್ರಸನ್ನನಿಗೆ ಏಟು ಆದ ವಿಚಾರ ತಿಳಿದು ಮುತ್ತುರಾಜು ಚಾಸಾ.1, ಚಾಸಾ.3 ಶಿವು.ಟಿ.ಎನ್. ಇಬ್ಬರೂ ಬೆಂಗಳೂರಿನಿಂದ 407 ಗೂಡ್ಸ್ ಟೆಂಪೋದಲ್ಲಿ ಪ್ರಸನ್ನನನ್ನು ನೋಡಲು ತೊಪ್ಪನಹಳ್ಳಿಯ ಚಾಸಾ.1 ರವರ ತೋಟದ ಮನೆಗೆ ಬಂದರು. ನನ್ನಲ್ಲಿ ಮುತ್ತುರಾಜು ಪ್ರಸನ್ನನಿಗೆ ಹೊಡೆದ ಬಾಬ್ತು ದೂರು ನೀಡಿದ್ದೀರಿ ಎಂದು ಕೇಳಿದರು. ಆಗ ನಾನು ಹೌದು ನೀಡಿದ್ದೇವೆ ಎಂದು ಹೇಳಿದೆ. ದೂರು ನೀಡಿದ ಬಾಬ್ತು ಹಿಂಬರಹ ತಂದಿದ್ದೀರಾ ಎಂದು ಕೇಳಿದರು. ಆಗ ಚಿಕ್ಕಪ್ಪ ಶಿವರಾಮು ಚಾಸಾ.14 ಮತ್ತು ಆರೋಪಿ ಕಡೆಯವರಾದ ಚನ್ನೇಗೌಡ, ಮಹೇಂದ್ರ, ಮುತ್ತುರಾಜು, ಸಿಂಧು ಇನ್ನೂ ಹಲವಾರು ಜನ ಠಾಣೆಯ ಬಳಿ ಇದ್ದಾರೆ, ಅವರು ಪುಟ್ಟಲಿಂಗಮ್ಮನನ್ನು ಕರೆದುಕೊಂಡು ಬಂದು ಸುಳ್ಳು ರೇಪ್ ಕೇಸು ನೀಡುತ್ತಿದ್ದಾರೆ ಎಂದು ನನಗೆ ಚಿಕ್ಕಪ್ಪ ಶಿವರಾಮು ಚಾಸಾ.14 ಹೇಳಿದರು ಎಂದು ಹೇಳಿದೆ.

3. ಆಗ ನಾವು ಅಂದರೆ ನಾನು, ಶಿವು, ಸ್ವಾಮಿ, ಯೋಗರಾಜು, ಹೇಮಂತ್, ಮುತ್ತುರಾಜು ಎಲ್ಲರೂ ಮದ್ದೂರು ಪೊಲೀಸ್ ಠಾಣೆಯ ಬಳಿ ಹೋದೆವು. ಅಲ್ಲಿ ಹೋದಾಗ ಪುಟ್ಟಸ್ವಾಮಿ, ಜಗದೀಶ, ಪ್ರಸನ್ನ ಮತ್ತು ಇತರರ ಮೇಲೆ ಸುಳ್ಳು ರೇಪ್ ಕೇಸು ನೀಡುತ್ತಿದ್ದಾರೆ ಎಂದು ತಿಳಿಯಿತು. ಆಗ ಮುತ್ತುರಾಜು ಪೊಲೀಸರಲ್ಲಿ ಸುಳ್ಳು ರೇಪ್ ಕೇಸು ಯಾಕೆ ತೆಗೆದುಕೊಳ್ಳುತ್ತಿದ್ದೀರಿ ಎಂದು ಕೇಳಿದರು. ಆಗ ಪೊಲೀಸರು ದೂರು ನೀಡಿದ್ದಾರೆ ಅದನ್ನು ಸ್ವೀಕರಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು. ತನಿಖೆ ನಡೆದಾಗ ನಿಜ ಗೊತ್ತಾಗುತ್ತದೆ ಎಂದು ಹೇಳಿದರು. ಅಲ್ಲಿಂದ ಚಾಸಾ.14 ಮತ್ತು ಮುತ್ತುರಾಜು ತೊಪ್ಪನಹಳ್ಳಿಗೆ ಹೋದರು. ನಾನು, ಸ್ವಾಮಿ, ಯೋಗರಾಜು, ಶಿವು ಹೇಮಂತ್ ಮದ್ದೂರಿನಲ್ಲಿರುವ ಸ್ನೇಹಿತ ಕಿರಣ್ ರವರ ಮನೆಗೆ ಕ್ರಿಸ್ ಮಸ್ ಹಬ್ಬದ ಊಟಕ್ಕೆ ಹೋದೆವು. ಊಟ ಮುಗಿಸಿ ಸಾಯಂಕಾಲ 5.30 ಗಂಟೆಗೆ ತೊಪ್ಪನಹಳ್ಳಿಯ ಚಾಸಾ.1 ರವರ

ತೋಟದಮನೆಗೆ ಹೋದೆವು. ಅಲ್ಲಿ ದೊಡ್ಡಪ್ಪ ಶಿವಣ್ಣ, ಚಿಕ್ಕಪ್ಪ ಶಿವರಾಮು, ಮುತ್ತುರಾಜು ಇದ್ದರು. ಅಷ್ಟರಲ್ಲಿ ಊರಿನಲ್ಲಿ ಗಲಾಟೆ ಶಭ್ಧ ಕೇಳಿಸಿತು. ಅದನ್ನು ನೋಡಲು ಚಾಸಾ.1 ಮತ್ತು ಚಾಸಾ.2 ರವರು ತೋಪ್ಪನಹಳ್ಳಿ ಊರಿನೊಳಗೆ ಹೋದರು. ಅವರು ಸುಮಾರು ಹೊತ್ತಾದರೂ ಬರದೇ ಇದ್ದಾಗ ನಾನು ಮತ್ತು ಸ್ವಾಮಿ ಚಾಸಾ.4 ಅವರು ಎಲ್ಲಿ ಹೋಗಿದ್ದಾರೆಂದು ಕೇಳಿಕೊಂಡು ಕುಮಾರ ಎಂಬುವವರ ಮನೆಯ ಬಳಿ ಹೋದೆವು. ಆಗ ಚಾಸಾ.1 ನಮ್ಮನ್ನು ನೀವು ಯಾಕೆ ಬಂದಿದ್ದೀರಿ ಹೋಗಿ ಎಂದು ಹೇಳಿ ನಮ್ಮನ್ನು ಹಿಂದೆ ಕಳುಹಿಸಿದರು. ಅಲ್ಲಿಂದ ನಾವು ತೋಟದ ಮನೆ ಬರುತ್ತಿರುವಾಗ ನಮ್ಮೂರಿನ ಹಳೆ ಮುತ್ತುರಾಯಸ್ವಾಮಿ ದೇವಸ್ಥಾನದ ಬಳಿ ಬರುತ್ತಿರುವಾಗ ಅಲ್ಲಿ ಶಂಕರನ ಮಗ ಮುತ್ತ ಅಲ್ಲಿ ನಿಂತಿದ್ದ. ಆಗ ನಾನು ನಮ್ಮ ಅಣ್ಣನಿಗೆ ಯಾಕೆ ಹೊಡೆದೆ ಎಂದು ಕೇಳಿದೆ. ಅಷ್ಟರಲ್ಲಿ ಅಲ್ಲಿಗೆ ಚಾಸಾ.1 ಮತ್ತು ಚಾಸಾ.2 ಬಂದರು. ಅವರು ದೂರು ನೀಡಿದ್ದೇವೆ, ಪೊಲೀಸರು ನೋಡಿಕೊಳ್ಳುತ್ತಾರೆಂದು ಹೇಳಿ, ನಮ್ಮನ್ನು ಕರೆದುಕೊಂಡು ತೋಟದ ಮನೆಗೆ ಹೊರಟರು. ನಾವು ತೋಟದ ಮನೆಗೆ ಹೋಗುತ್ತಿರುವಾಗ ದೊಡ್ಡ ಅರಳೀಮರದ ಬಳಿ ಚನ್ನೇಗೌಡ, ಮಹೇಂದ್ರ, ಮುತ್ತುರಾಜು ಅಲಿಯಾಸ್ ಷಡ್ಡು, ಸಿಂಧು, ಉಮೇಶ ಇನ್ನೂ ಹಲವಾರು ಜನ ಗುಂಪು ಕಟ್ಟಿಕೊಂಡು ನಿಂತಿದ್ದರು. ನಮ್ಮನ್ನು ಚನ್ನೇಗೌಡ ಅಡ್ಡ ಹಾಕಿದ. ಕಂಪ್ಲೆಂಟ್ ನೀಡಿದ್ದೀರಾ ಎಂದು ಬಾಯಿಗೆ ಬಂದ ಹಾಗೇ ಬೈದ. ನಾನು ಯಾಕೆ ಕೆಟ್ಟದಾಗಿ ಬೈಯುತ್ತಿದ್ದೀರಿ ಎಂದು ಕೇಳಿದಾಗ, ನೀನು ನನ್ನ ಸ್ನೇಹಿತ ಎಂದು ಹೇಳುತ್ತಿದ್ದೇನೆ, ನಿಮ್ಮವರನ್ನೆಲ್ಲಾ ಇಲ್ಲಿಂದ ಕರೆದುಕೊಂಡು ಹೋಗು ಇಲ್ಲದಿದ್ದರೆ ನಿಮ್ಮ ಕಡೆಯವರನ್ನು ಕೊಚ್ಚಿ ಹಾಕುತ್ತೇನೆಂದು ಹೇಳಿದ. ಅಷ್ಟರಲ್ಲಿ ಅಲ್ಲಿಗೆ ಮಹೇಂದ್ರ ಬಂದ. ಶಂಕರನ ಮಗ ಮುತ್ತುವಿನ ಬಳಿ ಏನು ತಾಕತ್ತು ತೋರಿಸುತ್ತೀರಿ, ನಮ್ಮಲ್ಲಿ ನಿಮ್ಮ ತಾಕತ್ತು ತೋರಿಸಿ ಎಂದು ಹೇಳಿದ. ಆಗ ನನ್ನ ತಮ್ಮ ಯೋಗರಾಜ್ ನಮ್ಮ ಅಣ್ಣನಿಗೆ ಹೊಡೆದಿದ್ದೀರಿ ಅದನ್ನು ಕೇಳುತ್ತಿದ್ದೇವೆ, ನೀವು ಯಾಕೆ ಆ ವಿಚಾರ ಕೇಳುತ್ತಿದಿದ್ದೀರಿ ನಿಮಗೂ ಅದಕ್ಕೂ ಏನು ಸಂಬಂಧ ಎಂದು ಪ್ರಶ್ನಿಸಿದ. ಆಗ ಮಹೇಂದ್ರ ಮುತ್ತ ಸ್ನೇಹಿತನ ಅಣ್ಣನ ಮಗ ಅದಕ್ಕೆ ಕೇಳುತ್ತಿದ್ದೇನೆ ಎಂದು ಹೇಳಿದ. ಆಗ ಯೋಗರಾಜು ನೀವು ಸ್ನೇಹಿತನ ಮಗನಿಗೆ ಹೊಡೆದಿದ್ದಕ್ಕೆ ಕೇಳಬಹುದು, ನಾವು ನಮ್ಮ ಅಣ್ಣನಿಗೆ ಹೊಡೆದದ್ದಕ್ಕೆ ಕೇಳಬಾರದ ಎಂದು ಕೇಳಿದ. ಆಗ ಚಾಸಾ.1 ಮಹೇಂದ್ರನಿಗೆ ಹಿರಿಯರಾಗಿ ನೀವು ಕೂರಿಸಿ ನ್ಯಾಯ ಪಂಚಾಯಿತಿ ಮಾಡಿ ತೀರ್ಮಾನ ಮಾಡಬಹುದಿತ್ತು, ಆದರೂ ಸುಳ್ಳು ದೂರು ನೀಡಿದ್ದೀರಿ ಎಂದು ಹೇಳಿದ. ಆಗ ಮಹೇಂದ್ರ, ಮುತ್ತುರಾಜು ಚಾಸಾ.1 ರವರಿಗೆ ನಿಮ್ಮ ಕೈಯಲ್ಲಿ ಬುದ್ದಿ ಮಾತು ಹೇಳಿಸಿಕೊಳ್ಳುವುದಿಲ್ಲ, ನೀನು ಬುದ್ದಿ ಹೇಳಬೇಡ ಎಂದು ಹೇಳಿದ. ಕೊನೆಯದಾಗಿ ಎಚ್ಚರಿಕೆ ಕೊಡುತ್ತೇನೆ ಹೋಗು ಎಂದು ಹೇಳಿದ. ಇಲ್ಲವಾದರೆ ಪರಿಣಾಮ ಸರಿಯಿರುವುದಿಲ್ಲ ಎಂದು

ಹೇಳಿದ. ಆಗ ಮುತ್ತುರಾಜು ಅಂತಹ ತಪ್ಪು ನಾವು ಏನು ಮಾಡಿದ್ದೇವೆ ಎಂದು ಕೇಳಿದ. ಆಗ ಮಹೇಂದ್ರ ಬಾಯಿ ಮಾತಿನಲ್ಲಿ ಹೇಳಿದರೆ ಕೇಳುವುದಿಲ್ಲ ಎತ್ತಿಕೊಳ್ಳಿರಿ ಎಂದು ಹೇಳಿದ. ತಕ್ಷಣ ಮುತ್ತುರಾಜು ಅಲಿಯಾಸ್ ಷಡ್ಡು 10 ನೇ ಆರೋಪಿ ಪಕ್ಕದಲ್ಲಿ ನಿಂತಿದ್ದ ಬುಲೆರೋ ಟೆಂಪೋ ಹತ್ತಿ ಅದರಿಂದ ದೊಣ್ಣೆಗಳು, ರಾಡುಗಳನ್ನು ತೆಗೆದು ಕೆಳಗೆ ಬಿಸಾಡಿದ. ಆಗ 1 ನೇ ಆರೋಪಿ ಚನ್ನೇಗೌಡ ಟೆಂಪೋ ಬಾಗಿಲು ತೆಗೆದು ಮಚ್ಚು ಎತ್ತಿಕೊಂಡು ಬಂದ. ಏಕಾಏಕಿ ಚಾಸಾ.1 ರವರ ತಲೆಗೆ ಹೊಡೆದ. ಬಳಿಕ 10 ನೇ ಆರೋಪಿ ರಾಡಿನಿಂದ ಚಾಸಾ.1 ರವರ ತಲೆಗೆ ಹೊಡೆದ. ಆಗ 2 ನೇ ಆರೋಪಿ ಮಹೇಂದ್ರ ಚೂರಿ ತೆಗೆದುಕೊಂಡು ಬಂದು ಮುತ್ತುರಾಜುಗೆ ಚುಚ್ಚಲು ಬಂದ. ಆಗ ಹೇಮಂತು ಮುತ್ತುರಾಜುವನ್ನು ತಬ್ಬಿ ಎಳೆದುಕೊಂಡ, ಆಗ ಮಹೇಂದ್ರ ಹೊಡೆದ ಏಟು ಹೇಮಂತನ ಕೈಗೆ ಬಿತ್ತು. ಅಷ್ಟರಲ್ಲಿ ಮಹೇಂದ್ರ ಜೋರಾಗಿ ಕಿರುಚಿ, ಲೈಟ್ ಆಫ್ ಮಾಡಿ ಯಾರನ್ನೂ ಉಳಿಸಬೇಡಿ ಎಂದು ಹೇಳಿದ. ಮುತ್ತುರಾಜುವಿನ ತಲೆಗೆ ಗಾಯವಾಗಿ ರಕ್ತ ಬರುತ್ತಿತ್ತು, ಹೇಮಂತನ ಕೈಗೆ ತಾಗಿ ರಕ್ತ ಬರುತ್ತಿತ್ತು. ನಾವು ತಕ್ಷಣ ಆ ಇಬ್ಬರನ್ನೂ ಚಾಸಾ.3 ರವರ ಜೊತೆ ಮದ್ದೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದೆವು. ನಾನು ಭಯದಿಂದ ಅಲ್ಲಿಂದ ಓಡಿ ಹೋದೆ. ಆ ಗಲಾಟೆಯಲ್ಲಿ ದೊಣ್ಣೆಯಿಂದ ನನ್ನ ಭುಜಕ್ಕೆ ಏಟು ಬಿದ್ದಿತ್ತು, ಆದರೆ ನಾನು ಚಿಕಿತ್ಸೆ ಪಡೆದಿಲ್ಲ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿದಾಗ ನಾನು ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಸಃಕಾರಣಗಳು ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.